ತಜ್ಞರ ಅಭಿಪ್ರಾಯವನ್ನು ಪಡೆದೇ ಮಾಡಿದ್ದೇವೆ, ಅದರ ಫಲವೇ ನಮಗೆ ಹೋದ ವರ್ಷ ಉತ್ತಮ ವಾಗಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಸದಸ್ಯರಾದ ಶ್ರೀ ಕಕ್ಕಿಲಾಯರವರು ಕೂಡ ಹೇಳಿದ ರೀತಿಯಲ್ಲಿ ನಾವು ಈ ಹೆಲಿಕ್ಯಾಪ್ಟರಗಾಗಿ ಬೇರೆಯವರನ್ನೇ ಅವಲಂಬನೆ ಮಾಡಿಕೊಳ್ಳಬೇಕಾಗಿದೆ. ಈ ಹೆಲಿಕ್ಯಾಪ್ಟರ್‌ನ್ನು ಕೇಂದ್ರ ಸರ್ಕಾರದ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನವರು ಕಳುಹಿಸಿ ಕೊಡುತ್ತಾರೆ. ನಾವು ರಿಕ್ವಿಜಿಷನ್ ಕೊಟ್ಟರೆ ಅವರು ಕಳುಹಿಸಿ ಕೊಡುತ್ತಾರೆ. ನಾವು ಕಳೆದ ಸಾರಿ ಬರೆದಾಗ ಅವರೇನೋ ಕಳುಹಿಸಿದ್ದರು ಆದರೆ ಕೆಟ್ಟು ಹೋಗಿ ಸರಿಯಾಗಿ ಕೆಲಸ ಮಾಡದೇ ಇದ್ದುದರಿಂದ ಬೇರೆ ಒಂದು ಹೆಲಿಕ್ಯಾಪ್ಟರ್‌ನ್ನು ಕಳುಹಿಸಿದ್ದರು. ಇದರಿಂದ ಒಂದೆರಡು ತಿಂಗಳು ಹೆಚ್ಚು ಕಡಿಮೆಯಾಯಿತು ಅಷ್ಟೆ.

ಶ್ರೀ ಜೆ. ಎಚ್. ಪಟೇಲ್.—ಬೇರೆ ಕಡೆಯವರಿಂದ ಏತಕ್ಕೆ ಹೆಲಿಕ್ಯಾಪ್ಟರನ್ನು ತರಿಸುತ್ತೀರಿ ? ನಿಮ್ಮಲ್ಲಿಯೇ ಇರುವ ಹೆಲಿಕ್ಯಾಪ್ಟರ್‌ನ್ನು ಉಪಯೋಗಿಸುವುದರಲ್ಲಿ ಟೆಕ್ನಿಕಲ್ ಆಗಿ ಏನು ತೊಂದರೆ ಇದೆ?

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ, ಈ ಹೆಲಿಕ್ಯಾಪ್ಟರ್‌ಗೂ ಆ ಹೆಲಿಕ್ಯಾಪ್ಟರಗೂ ವ್ಯತ್ಯಾಸ ವಿದೆ. ಆದಕ್ಕೆ ಎಕ್ವಿಪ್‌ಮೆಂಟೇ ಬೇರೆ, ಇದರ ಎಕ್ವಿಪ್‌ಮೆಂಟೇ ಬೇರೆ. ಆ ಎಕ್ವಿಪ್‌ಮೆಂಟನ್ನೇ ಇದಕ್ಕೇ ಜೋಡಿಸಿಕೊಳ್ಳಿ ಎಂದು ಹೇಳುವುದಾದರೆ ಆಗಬಹುದು ಸ್ವಾಮಿ.

Lift Irrigation Schemes in Mysore Taluk

715 SRI D. JAYADEVARAJ URS (Chamundeshwari).—Will the Minister for Transport and Minor Irrigation be pleased to State.—

(a) the estimated cost of expenditure of Avanduru and Edeyuru L ft Irrigation schemes in Mysore taluk ;

(b) the amount spent so far ;

(c) the period required to complete them ?

SRI M.M.J. SADYOJATHA. (Minister for Transport and Minor Irrigation)—

(a) An estimated cost of Rs. 14 lakus for Avandur scheme and Rs. 14.7 lakhs for Edehalli scheme in Mysore Taluk have been sanctioned.

(b) A sum of Rs. 22,78.253 and Rs. 17,65,846 to Avandur Lift Irrigation Scheme and Edehalli Lift Irrigation Scheme respectively have been spent so far.

(c) These Schemes are expected to be completed by June 1982.

ಶ್ರೀ ಡಿ. ಜಯದೇವರಾಜ್ ಅರಸ್.—ಮೈಸೂರು ತಾಲ್ಲೂಕಿನ ಅವಂದೂರು ಮತ್ತು ಎಡೆಯೂರು ಏತ ನೀರಾವರಿ ಯೋಜನೆಗಳ ಕಾರ್ಯವನ್ನು ಜೂನ್‌ನೊಳಗೇ ಮುಗಿಸಿ ನೀರನ್ನು ಒದಗಿಸುತ್ತೀರಾ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಜೂನ್ ತಿಂಗಳೊಳಗೆ ಕೆಲಸ ಪೂರೈಸಿ ನೀರನ್ನು ಕೊಡುತ್ತೇವೆ

ಶ್ರೀ ಎಂ.ಸಿ. ಬಸಪ್ಪ.—ನಿಳ ಲಕ್ಷ ರೂ.ಗಳ ಎಸ್ಟಿಮೇಟ್ ಕೆಲಸಕ್ಕೆ ೨೨ ಲಕ್ಷ ರೂ. ಗಳನ್ನು ಖರ್ಚು ಮಾಡಿರುವುದಕ್ಕೆ ಕಾರಣವೇನು ? ಇದಕ್ಕೆ ಯಾರು ಜವಾಬ್ದಾರರು ಎಂದುದನ್ನು ತಿಳಿಸುತ್ತೀರಾ ಸ್ವಾಮಿ

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಸಕಾಲಕ್ಕೆ ಕೆಲಸ ಮುಗಿದಿರುವುದಿಲ್ಲ, ರೇಟ್ಸ್‌ಗಳು ಹೆಚ್ಚಾಗು ತ್ತಿರುತ್ತವೆ, ಆದುದರಿಂದ ಹೆಚ್ಚಾಗಿದೆ.

ಶ್ರೀ ಎಂ.ಸಿ. ಬಸಪ್ಪ.—ವಿಳಂಬ ಮಾಡುತ್ತಿದ್ದರೆ ರೇಟ್‌ಗಳು ಹೆಚ್ಚಾಗುತ್ತಲೇ ಹೋಗುತ್ತಿರುತ್ತದೆ ಅಷ್ಟು ನನಗೆ ಅರ್ಥವಾಗುತ್ತದೆ. ಆದರೆ ಇದಕ್ಕೆ ಯಾರು ಜವಾಬ್ದಾರರು ? ಈ ಹೆಚ್ಚುವರಿ ಹಣವನ್ನು ಯಾರಿಂದ ವಸೂಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಿ ಈ ರೀತಿ ವಿಳಂಬ ಮಾಡುವುದನ್ನು ಕಡಿಮೆ ಮಾಡುವುದಕ್ಕೆ ಸರ್ಕಾರದವರು ಏನು ಕ್ರಮವನ್ನು ಕೈಗೊಂಡಿದೆ ?

ಶ್ರೀ ಎಂ.ಪಂ.ಜೆ. ಸದ್ಯೋಜಾತ.—ವಿಳಂಬವಾಗಿದ್ದರೆ ತಿಳಿದುಕೊಂಡು ತಮಗೆ ತಿಳಿಸುತ್ತೇನೆ.

Stoppage of Hipparagi Barrage works.

749 SRI V. V. PATTAR (Jamkhandi).—Will the the Minister for Major and Medium Irrigation be pleased to state.—

(a) whether it is a fact that Hipparagi Barrage works is stopped due to want of funds.

(b) if so whether it is a fact that about 3000 persons are unemployed.

(c) whether Government will provide more funds for the same

SRI B.B. CHIMMANAKATTI (Minister of State for Major and Medium Irrigation).—

(a) No.

(b) Does not arise in view of reply to question (a) above.

(c) Funds will be provided to projects according to the priority and requirement.

ಶ್ರೀ ವಿ.ವಿ. ಪತ್ತಾರ್.—ಅಧ್ಯಕ್ಷರೇ, ಈ ಹಿಪ್ಪರಿಗೆ ಯೋಜನೆ ಏನಿದೆ ಇದು ಜಮಖಂಡಿ ಮತ್ತು ಅಥಣಿ ತಾಲ್ಲೂಕುಗಳ ಬರಗಾಲವನ್ನು ನಿವಾರಣೆ ಮಾಡುವಂಥಾ ಒಂದು ಮುಖ್ಯವಾದ ಅವಶ್ಯಕ ವಾದ ಯೋಜನೆಯಾಗಿದೆ. ಆದರೆ ಮಾನ್ಯ ಮಂತ್ರಿಗಳವರು ತಮ್ಮ ಉತ್ತರದಲ್ಲಿ ಆದ್ಯತೆ ಹಾಗೂ ಅವಶ್ಯಕತೆ ಗಳ ಮೇರೆಗೆ ಯೋಜನೆಗಳಿಗೆ ಹಣವನ್ನು ಒದಗಿಸಲಾಗುವುದೆಂದು ಹೇಳಿದ್ದಾರೆ. ಈ ಯೋಜನೆ ಅವಶ್ಯಕತೆ ಇಲ್ಲವೆಂದು ಏನಾದರೂ ಸರ್ಕಾರದವರ ಗಮನಕ್ಕೆ ಬಂದಿದೆಯೇ ಅಥವಾ ಇಲ್ಲವೇ ಎನ್ನುವುದನ್ನು ತಿಳಿಸ ಬೇಕು ಸ್ವಾಮಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಇದು ಅವಶ್ಯಕತೆಯ ಯೋಜನೆ ಎಂದೇ ಈಗಾಗಲೇ ಕೆಲಸಗಳನ್ನು ಕೂಡ ನಾವು ಪ್ರಾರಂಭ ಮಾಡಿದ್ದೇವೆ. ಮತ್ತೆ ಈ ವರ್ಷ ನಾವು ಸುಮಾರು ೧೦ ಲಕ್ಷ ರೂ. ಗಳನ್ನು ಕೊಟ್ಟರೂ ಕೂಡ ಈಗಾಗಲೇ ಸುಮಾರು ಳಿಟಿ ಲಕ್ಷ ರೂ. ಗಳನ್ನು ಖರ್ಚು ಮಾಡಿದ್ದೇವೆ. ಮಾನ್ಯ ಸದಸ್ಯರು ಆತಂಕ ವ್ಯಕ್ತ ಪಡಿಸಿದ ಹಾಗೆ ಇದು ಅವಶ್ಯಕತೆಯಂ ಯೋಜನೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆ. ಮುಂದಿನ ವರ್ಷ ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಕೊಟ್ಟು ಆದಷ್ಟು ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ,

ಶ್ರೀ ವಿ.ವಿ. ಪತ್ತಾರ್.—ಈ ಯೋಜನೆಯನ್ನು ಆದ್ಯತೆ ಲಿಸ್ಟ್‌ನಲ್ಲಿ ಹಾಕಿದ್ದೀರಾ ಮತ್ತು ನಿರ್ದಿಷ್ಟವಾಗಿ ಎಷ್ಟು ದಿವಸಗಳಲ್ಲಿ ಈ ಯೋಜನೆಯನ್ನು ಮುಗಿಸುವವರಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನಿರ್ದಿಷ್ಟವಾಗಿ ಇಂಥಾ ದಿವಸದಲ್ಲಿಯೇ ಮುಗಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಇದರ ಬಗ್ಗೆ ಫರ್ದರ್ ಇನ್‌ವೆಸ್ಟಿಗೇಷನ್ ಮಾಡಬೇಕಾಗಿದೆ. ಇದರಿಂದ ೩ ಲಿಫ್ಟ್ ಇರಿಗೇಷನ್ ಸಾಧ್ಯವೇ ಅಥವಾ ಎರಡೇ ಲಿಫ್ಟ್ ಇರಿಗೇಷನ್ ಮಾಡಲು ಸಾಧ್ಯವೇ ಎನ್ನುವ ಬಗ್ಗೆ ನಿರ್ಧಾರ ಮಾಡಬೇಕಾಗಿದೆ. ಈ ಅಪ್ಪರ್ ಕೃಷ್ಣಾ ಯೋಜನೆಗೆ ಈ ಹಿಪ್ಪರಗಿ ಬ್ಯಾರೇಜ